**SC No. 23/2024**
**PW.-5**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್.ಸಿ. 23/2024**

| | | |
|---|---|---|
| ಸಾಕ್ಷಿದಾರರ ಹೆಸರು | ಜಂಬುಕುಮಾರ್ | ಪ್ರಮಾಣ ವಚನ ಮಾಡಿದ ದಿನಾಂಕ: 09.10.2025 |
| ತಂದೆಯ/ಗಂಡನ ಹೆಸರು | ಸಿ. ಮೋಹನ್ ಲಾಲ್ | |
| ವಯಸ್ಸು | 65 ವರ್ಷ | |
| ವೃತ್ತಿ | ವ್ಯಾಪಾರ | ಪ್ರಾ.ಸಾಃ 5 |
| ವಾಸ ಸ್ಥಳ | ಮಂಡ್ಯ | ಚಾ.ಸಾಃ 12 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನ್ನದು ಸುರಾನಾ ಬ್ಯಾಂಕರ್ಸ್ ಇದ್ದು ಅದರ ಅಡಿಯಲ್ಲಿ ನಾನು ಒಡವೆಗಳನ್ನು ಗಿರವಿ ಇಟ್ಟುಕೊಂಡು ಹಣ ಕೊಡುತ್ತೇನೆ. ಸದರಿ ಅಂಗಡಿ ಮಂಡ್ಯದ ಕಾಮನಗುಡಿ ಸರ್ಕಲ್ ಬಜಾರ್ ರಸ್ತೆಯಲ್ಲಿ ಇರುತ್ತದೆ. ಕಳೆದ 3 ವರ್ಷಗಳ ಹಿಂದೆ ಪೊಲೀಸರು ನನ್ನ ಅಂಗಡಿಗೆ ಬಂದಿದ್ದರು. ಒಬ್ಬ ಪಾರ್ಟಿ ನನ್ನ ಅಂಗಡಿಯಲ್ಲಿ ಒಡವೆಗಳನ್ನು ಗಿರವಿ ಇಟ್ಟು ಹಣ ಪಡೆದುಕೊಂಡಿರುತ್ತಾನೆ ಆ ಒಡವೆಗಳನ್ನು ವಾಪಸ್ಸು ಕೊಡಿ ಎಂದು ಕೇಳಿದ್ದರು. ಏಕೆಂದರೆ ನನ್ನ ಅಂಗಡಿಯಲ್ಲಿ ಗಿರವಿ ಇಟ್ಟಂತಹ ಒಡವೆಗಳು ಕಳ್ಳತನ ಮಾಡಿಕೊಂಡು ತಂದಂತಹ ಒಡವೆಗಳು ಇರುತ್ತವೆ ಎಂದು ಹೇಳಿ ವಾಪಸ್ಸು ಕೇಳಿದ್ದರು. ನಾನು ಆ ಒಡವೆಗಳನ್ನು ಪೊಲೀಸರಿಗೆ ವಾಪಸ್ಸು ಕೊಟ್ಟಿದ್ದೆ. ಆ ಬಗ್ಗೆ ಪೊಲೀಸರು ಸ್ಥಳ ದಲ್ಲಿ ಮಹಜರ್ ಮಾಡಿದ್ದರು.

ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ನೋಟೀಸ್ ಅನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-14 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅಮಾನತ್ತು ಪಂಚನಾಮೆ ಈಗಾಗಲೇ ನಿಪಿ-11 ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-11(ಸಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಫೋಟೋದಲ್ಲಿ ಇರುವ ಒಂದು ಚಿನ್ನದ ಸರ ಮತ್ತು ಎರಡು ಚಿನ್ನದ ಮಾಟಿಯನ್ನು ನೋಡಿ ಗುರುತಿಸಿದ್ದು ಸದರಿ ಫೋಟೋಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲ್ಪಟ್ಟಿರತ್ತವೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ಈ ಹಿಂದೆ ನಾನು ಎಲ್ಲಿಯೂ ನೋಡಿರುವುದಿಲ್ಲ. ಪೊಲೀಸರು ಆ ದಿನ ಬಂದಾಗ ಜೊತೆಯಲ್ಲಿ ಒಬ್ಬ ಆಸಾಮಿಯನ್ನು ಕರೆದುಕೊಂಡು ಬಂದಿದ್ದರು. ಆ ದಿನ ನೋಡಿದಂತಹ ಆಸಾಮಿ ಈ ದಿನ ನ್ಯಾಯಾಲಯದ ಮುಂದೆ ಇರುತ್ತಾರೋ ಅಥವಾ ಇಲ್ಲವೋ ಎಂದು ಹೇಳಲು ಆಗುವುದಿಲ್ಲ. ನಾನು ಪೊಲೀಸರ ಮುಂದೆ ಈ ಬಗ್ಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:</u>**

ದಿನಾಂಕ 08.04.2023 ರಂದು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನು ನನ್ನ ಅಂಗಡಿಗೆ ಬಂದು ಒಂದು ಚಿನ್ನದ ಸರ ಮತ್ತು ಒಂದು ಜೊತೆ ಮಾಟಿಯನ್ನು ತಂದಿದ್ದು ಸದರಿ ಅವುಗಳು ತನ್ನ ತಾಯಿಯ ಒಡವೆಗಳಾಗಿದ್ದು ತಾಯಿಯನ್ನು ಆಸ್ಪತ್ರೆಗೆ ಸೇರಿಸಿದ್ದು ತಕ್ಷಣ ಹಣ ಬೇಕಾಗಿರುತ್ತದೆ ಎಂದು ಕೇಳಿದ್ದು ನಾನು ಅವುಗಳನ್ನು ತೂಕ ಮಾಡಿ ನೋಡಲಾಗಿ ಚಿನ್ನದ ಸರ 9.590 ಗ್ರಾಂ ತೂಕ ಇದ್ದು ಎರಡು ಚಿನ್ನದ ಮಾಟಿಗಳು ಒಟ್ಟು 3.420 ಗ್ರಾಂ ತೂಕ ಇದ್ದು ಸದರಿಅವುಗಳನ್ನು ಅಡವಿಟ್ಟುಕೊಂಡು ಆರೋಪಿತನಿಗೆ ಒಟ್ಟು 40,000/- ರೂಗಳನ್ನು ನೀಡಿದ್ದೆ ಎಂದರೆ ಸರಿಯಲ್ಲ.

ನರಸಿಂಹರಾಜ ಪೊಲೀಸ್ ಠಾಣೆಯ ಇನ್ಸ್ ಪೆಕ್ಟರ್ ಆದ ಲಕ್ಷ್ಮಿಕಾಂತ್ ಕೆ ತಳವಾರ್ ರವರು ಆರೋಪಿತನನ್ನು ಕರೆದುಕೊಂಡು ನನ್ನ ಅಂಗಡಿಗೆ ಬಂದಿದ್ದು ಮತ್ತು ಆರೋಪಿತನನ್ನು ತೋರಿಸಿ ತಮ್ಮ ಠಾಣಾ ಮೊ.ಸಂಖ್ಯೆ 52/2023 ಕಲಂ 394 ಐಪಿಸಿ ಪ್ರಕರಣದಲ್ಲಿ ಅರೆಸ್ಟ್ ಮಾಡಿದ್ದು ಈತನು ದಿನಾಂಕ 29.03.2023 ರಂದು ರಾತ್ರಿ ಸುಮಾರು 7.30 ಗಂಟೆ ಸಮಯದಲ್ಲಿ ಮೈಸೂರಿನ ಹಳೆ ಕೆಸರೆಯ ಗಂಗಾ ನಗರದಲ್ಲಿನ ಮನೆ ನಂಬರ್ 75 ರಲ್ಲಿ ವಾಸವಾಗಿರುವ ಮಂಜುಳ ಎಂಬವರಿಗೆ ಹಲ್ಲೆ ಮಾಡಿ ಅವರಿಂದ ಚಿನ್ನದ ಒಡವೆಗಳನ್ನು ಕಿತ್ತುಕೊಂಡು ನಿಮ್ಮ ಬಳಿ ಅಡವಿಟ್ಟಿರುತ್ತಾರೆ ಎಂದು ಹೇಳಿ ಮತ್ತು

ಚೀಟಿಯನ್ನು ಆರೋಪಿತನ ಕಡೆಯಿಂದ ಅಮಾನತ್ತು ಪಡಿಸಿಕೊಂಡಿದ್ದು ನನಗೆ ಬಂಗಾರದ ಒಡವೆಗಳನ್ನು ಹಾಜರುಪಡಿಸುವಂತೆ ಹೇಳಿದ್ದರ ಮೇರೆಗೆ ನಾನು ಅವುಗಳನ್ನು ಹಾಜರುಪಸಿಡಿದ್ದೆ ಎಂದರೆ ಈಗ ನನಗೆ ಗುರುತಿಸಲು ಆಗುವುದಿಲ್ಲ. ನಾನು ಆರೋಪಿತನು ತನ್ನ ತಾಯಿಯ ಒಡವೆಗಳು ಎಂದು ಸುಳ್ಳು ಹೇಳಿ ಚಿನ್ನದ ಒಡವೆಗಳನ್ನು ಅಡ ಇಟ್ಟಿದ್ದ ಎಂದು ಪೊಲೀಸರ ಮುಂದೆ ಹೇಳಿದ್ದೆ ಎಂದರೆ ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಈಗ ಓದಿ ಹೇಳಿದ ನಿಪಿ-15 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನೇ ನಿಪಿ-3 ಮತ್ತು 4 ರ ಫೋಟೋಗಳಲ್ಲಿ ಇರುವ ಬಂಗಾರದ ಸರ ಮತ್ತು ಮಾಟಿಗಳನ್ನು ಕಳವು ಮಾಡಿ ನನ್ನ ಅಂಗಡಿಗೆ ಅಡವಿಟ್ಟು 40,000/- ರೂ ಪಡೆದುಕೊಂಡಿದ್ದರು ಸಹ ನಾನು ಈಗ ಹೇಳಲು ಆಗುವುದಿಲ್ಲ ಎಂದು ಹೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :</u>**

ನನಗೆ ಸುರಾನಾ ಬ್ಯಾಂಕರ್ಸ್ ನಡೆಸುವ ಬಗ್ಗೆ ಲೈಸನ್ಸ್ ಇರುತ್ತದೆ. ಆ ಲೈಸನ್ಸ್ ಕಾಪಿಯನ್ನು ಪೊಲೀಸರಿಗೆ ಕೊಟ್ಟಿರಲಿಲ್ಲ. ನಾನು ನಿಪಿ-11 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಿಪಿ-11 ಅನ್ನು ಪೊಲೀಸ್ ಠಾಣೆಯಲ್ಲಿಯೇ ತಯಾರಿಸಿದ ದಾಖಲೆ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುರಾನಾ ಬ್ಯಾಂಕರ್ಸ್ ನ ಮಾಲೀಕ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತಹ ಕಾಮನಗುಡಿ ಸರ್ಕಲ್ ನಲ್ಲಿ ಸುರಾನಾ ಬ್ಯಾಂಕರ್ಸ್ ಎಂಬುವ ಅಂಗಡಿ

ಇರುವುದಿಲ್ಲ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**